ಬೆವಿಕಂ
BESCOM

# ಬೆಂಗಳೂರು ವಿದ್ಯುತ್ ಸರಬರಾಜು ಕಂಪನಿ ನಿಯಮಿತ
## BANGALORE ELECTRICITY SUPPLY COMPANY LIMITED
(Wholly owned Government of Karnataka Undertaking)

ಸಂಖ್ಯೆ: ಬೆ.ವಿ.ಕಂ/ಪ್ರವ್ಯ(ಗ್ರಾ.ಸಂ)/ಬಿಸಿ–48/2025-26/ 4640-4648
ಲಗತ್ತು:

ನಿಗಮ ಕಛೇರಿ,
ಕೃಷ್ಣರಾಜೇಂದ್ರ ವೃತ್ತ,
ಬೆಂಗಳೂರು–01
ದಿನಾಂಕ: 02 FEB 2026

**ಮೆ|| ಶ್ರೀ ಮಾರುತಿ ಗ್ರಾನೈಟ್ಸ್,**
ಸರ್ವೇ ನಂ: 120/2, 91/1, ಉಗನವಾಡಿ ಗ್ರಾಮ ಹಾಗೂ ಪೋಸ್ಟ್,
ಕಸಬ ಹೋಬಳಿ, ದೇವನಹಳ್ಳಿ ತಾಲ್ಲೂಕು,
ಬೆಂಗಳೂರು ಗ್ರಾಮೀಣ–562110.

**ಮಾನ್ಯರೇ,**

**ವಿಷಯ:** **ಮೆ|| ಶ್ರೀ ಮಾರುತಿ ಗ್ರಾನೈಟ್ಸ್,** ಹೆಚ್.ಟಿ. ಸ್ಥಾವರ ಸಂಖ್ಯೆ **DYHT-199** ಗೆ ರಿಯಾಯಿತಿ ವಿದ್ಯುಚ್ಛಕ್ತಿ ದರ ಯೋಜನೆಯಡಿಯಲ್ಲಿ ರಿಯಾಯಿತಿಯ ಮಂಜೂರಾತಿ ನೀಡುವ ಬಗ್ಗೆ.

**ಉಲ್ಲೇಖ:**
1. ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗದ ಜಕಾತಿ ಆದೇಶ, 2025 ದಿ: 27.03.2025.
2. **ಮೆ|| ಶ್ರೀ ಮಾರುತಿ ಗ್ರಾನೈಟ್ಸ್,** ರವರ ಕೋರಿಕೆ ಪತ್ರ ಈ ಕಛೇರಿಗೆ ಸ್ವೀಕರಿಸಿದ ದಿ: 19.01.2026.

ಉಲ್ಲೇಖಿತ ಪತ್ರ (1) ರ ಆದೇಶ, ಉಲ್ಲೇಖಿತ ಪತ್ರ (2) ರ ಅನುಸಾರ ಸದರಿ ಗ್ರಾಹಕರ ಕೋರಿಕೆಯನ್ವಯ **DYHT-199** ಹೆಚ್.ಟಿ ಸ್ಥಾವರಕ್ಕೆ ರಿಯಾಯಿತಿ ವಿದ್ಯುಚ್ಛಕ್ತಿ ದರ ಯೋಜನೆಯಡಿಯಲ್ಲಿ ನಿಗದಿತ ಮೂಲ ವಿದ್ಯುತ್ ಬಳಕೆ ಯೂನಿಟ್‌ಗಳ ಮೇಲ್ಪಟ್ಟ ಬಳಕೆಗೆ ಈ ಕೆಳಕಂಡ ನಿಯಮಗಳಿಗೊಳಪಟ್ಟು ರಿಯಾಯಿತಿ ದರವನ್ನು ಮಂಜೂರು ಮಾಡಲಾಗಿದೆ.

1. ರಿಯಾಯಿತಿ ವಿದ್ಯುಚ್ಛಕ್ತಿ ದರ ಯೋಜನೆಯು ಎಚ್.ಟಿ–2(a)/ಎಚ್.ಟಿ–2(b)/ಎಚ್.ಟಿ–2(c)/ಎಲ್.ಟಿ–3/ಎಲ್.ಟಿ–5 ವಿದ್ಯುತ್ ಬಳಕೆಗೆ ಮಾತ್ರವೆ ಅನ್ವಯಿಸುತ್ತದೆ. ಈ ಯೋಜನೆಯಲ್ಲಿ ವಿದ್ಯುತ್ ಬಳಕೆಯು ನಿಗದಿತ ಮೂಲ ಬಳಕೆಯ ಮಿತಿಗಿಂತ ಮೇಲ್ಪಟ್ಟಲ್ಲಿ, ಮೇಲ್ಪಟ್ಟ ಬಳಕೆಗೆ ಮಾತ್ರ ಈ ರಿಯಾಯಿತಿ ವಿದ್ಯುಚ್ಛಕ್ತಿ ದರ **ರೂ.5** ಪ್ರತಿ ಯೂನಿಟ್‌ಗೆ ಅನ್ವಯವಾಗುತ್ತದೆ.
2. ಸದರಿ ಗ್ರಾಹಕರ ಮೂಲ ಬಳಕೆ (Base Consumption) ಯನ್ನು ಏಪ್ರಿಲ್–22 ರಿಂದ ಮಾರ್ಚ್–24 ರ ಅವಧಿಗೆ **47,217** ಯೂನಿಟ್‌ಗಳನ್ನು ಮಾಹೆಯಾನ **ಮೂಲ ಬಳಕೆ** ಯೂನಿಟ್‌ಗಳೆಂದು (Monthly Base Consumption) ಉಪವಿಭಾಗದವರು ನೀಡಿರುವ ಮಾಹಿತಿಯನ್ನು ಪರಿಗಣಿಸಿ ನಿಗದಿಪಡಿಸಲಾಗಿರುತ್ತದೆ. ಮೂಲ ಬಳಕೆಯ ಯೂನಿಟ್‌ಗಳನ್ನು ನಿಗದಿಪಡಿಸಲು ಈ ಕೆಳಗಿನ ಮಾಹಿತಿಯನ್ನು ಪರಿಗಣಿಸಲಾಗಿದೆ.

| ಕ್ರ.ಸಂ. | ತಿಂಗಳು | ಒಟ್ಟು ಬಳಕೆ |
|---|---|---|
| 1 | ಏಪ್ರಿಲ್–22 | 47655.00 |
| 2 | ಮೇ–22 | 42900.00 |
| 3 | ಜೂನ್–22 | 41422.50 |
| 4 | ಜುಲೈ–22 | 47077.50 |

| | | |
|---|---|---|
| 5 | ಆಗಸ್ಟ್–22 | 52995.00 |
| 6 | ಸೆಪ್ಟೆಂಬರ್–22 | 54637.50 |
| 7 | ಅಕ್ಟೋಬರ್–22 | 48112.50 |
| 8 | ನವೆಂಬರ್–22 | 50415.00 |
| 9 | ಡಿಸೆಂಬರ್–22 | 51622.50 |
| 10 | ಜನವರಿ–23 | 51900.00 |
| 11 | ಫೆಬ್ರವರಿ–23 | 43260.00 |
| 12 | ಮಾರ್ಚ್–23 | 49680.00 |
| 13 | ಏಪ್ರಿಲ್–23 | 49665.00 |
| 14 | ಮೇ–23 | 48210.00 |
| 15 | ಜೂನ್–23 | 48420.00 |
| 16 | ಜುಲೈ–23 | 50182.50 |
| 17 | ಆಗಸ್ಟ್–23 | 47257.50 |
| 18 | ಸೆಪ್ಟೆಂಬರ್–23 | 31252.50 |
| 19 | ಅಕ್ಟೋಬರ್–23 | 47685.00 |
| 20 | ನವೆಂಬರ್–23 | 38407.50 |
| 21 | ಡಿಸೆಂಬರ್–23 | 49717.50 |
| 22 | ಜನವರಿ–24 | 49297.50 |
| 23 | ಫೆಬ್ರವರಿ–24 | 46357.50 |
| 24 | ಮಾರ್ಚ್–24 | 45075.00 |
| **ಒಟ್ಟು** | | **1133205.00** |
| **ಸರಾಸರಿ/ಮೂಲ ಬಳಕೆ** | | **47,217.00** |

3. **ಜಕಾತಿ ಆದೇಶ–2025 ರನ್ವಯ ಪರಿಷ್ಕೃತ ರಿಯಾಯಿತಿ ವಿದ್ಯುಚ್ಛಕ್ತಿ ದರ ಯೋಜನೆ ಪಡಿಯುವ ಗ್ರಾಹಕರು, ಬೆವಿಕಂ ಹೊರೆತುಪಡಿಸಿ ಅನ್ಯ ಮೂಲಗಳಿಂದ ವಿದ್ಯುತ್ ಪಡೆಯುವ/ಬಳಸುವ ಅವಕಾಶ ಇರುವುದಿಲ್ಲ ಹಾಗೂ ಈ ನಿಟ್ಟಿನಲ್ಲಿ ಸದರಿ ಯೋಜನೆಗಾಗಿ ಸಲ್ಲಿಸಿರುವ ಮನವಿ ಪತ್ರದ ದಿನಾಂಕ: 17.01.2026 ರಲ್ಲಿ ಈ ಕುರಿತಂತೆ ತಮ್ಮ ಒಪ್ಪಿಗೆಯನ್ನು ತಿಳಿಸಿ ಈ ಷರತ್ತಿಗೆ ಬದ್ಧರಾಗಿರುತ್ತೀರೆಂದು ತಿಳಿಸಿರುತ್ತೀರಿ. ಯೋಜನೆಯು ಮಂಜೂರಾದ ನಂತರದ ದಿನಗಳಲ್ಲಿ ಗ್ರಾಹಕರು ಅನ್ಯ ಮೂಲಗಳಿಂದ ವಿದ್ಯುತ್ ಬಳಸುತ್ತಿರುವುದು ಕಂಡುಬಂದಲ್ಲಿ, ಆ ದಿನದಿಂದಲೆ ಯೋಜನೆಯು ಸ್ವಯಂ ರದ್ದಾಗುತ್ತದೆ.**
4. **ಗ್ರಾಹಕರು ವಾಸ್ತವಿಕ ಒಪ್ಪಂದ ಬೇಡಿಕೆಯೊಂದಿಗೆ ಹೆಚ್ಚುವರಿ ಒಪ್ಪಂದ ಬೇಡಿಕೆ ಪಡೆದಲ್ಲಿ, ಉಪವಿಭಾಗವು, ಹೆಚ್ಚುವರಿಯಾಗಿ ಪಡೆದ ಒಪ್ಪಂದ ಬೇಡಿಕೆ ಪ್ರಮಾಣವನ್ನು ಪರಿಗಣಿಸಿ ಅಂದರೆ ಪ್ರತಿ**

**ಹೆಚ್ಚುವರಿ ಪ್ರಮಾಣದ ಕೆವಿಎಗೆ 67 ಯೂನಿಟ್‌ಗಳಂತೆ ನಿಗದಿತ ಮೂಲ ಬಳಕೆಯನ್ನು ಪರಿಷ್ಕರಿಸುವುದು ಹಾಗೂ ಪ್ರತಿಯನ್ನು ಮಾಹಿತಿಗಾಗಿ ಈ ಕಛೇರಿಗೆ ಒದಗಿಸುವುದು.**

5. ಬೆವಿಕಂ ಹೊರತುಪಡಿಸಿ ಅನ್ಯ ಮೂಲಗಳಿಂದ ಪಡೆದ ವಿದ್ಯುತ್ ಬಳಕೆಯ ಯೂನಿಟ್‌ಗಳನ್ನು ಮೂಲ ವಿದ್ಯುತ್ ಬಳಕೆಯನ್ನು ನಿಗದಿ ಪಡಿಸಲು ಪರಿಗಣಿಸಲು ಅವಕಾಶವಿರುವುದಿಲ್ಲ.
6. ಜಕಾತಿ ಆದೇಶ–2025 ರನ್ವಯ ಪರಿಷ್ಕೃತ ರಿಯಾಯಿತಿ ವಿದ್ಯುಚ್ಛಕ್ತಿ ದರ ಯೋಜನೆಯಲ್ಲಿರುವ ಗ್ರಾಹಕರು ಹೆಚ್ಚುವರಿ ಒಪ್ಪಂದದ ಬೇಡಿಕೆಯನ್ನು ಪಡೆಯದೆ ಪರಿಣಾಮಕಾರಿಯಾಗಿ ಯೋಜನೆಯನ್ನು ಬಳಕೆ ಮಾಡಿಕೊಳ್ಳುವ ಸಲುವಾಗಿ ಆಯೋಗವು ಗ್ರಾಹಕರಿಗೆ ತಮ್ಮ ಒಪ್ಪಂದದ ಬೇಡಿಕೆಯ/ ಮಂಜೂರಾದ ವಿದ್ಯುತ್ ಪ್ರಮಾಣದ 20% ಹೆಚ್ಚುವರಿಯಾಗಿ ಉಪಯೋಗಿಸಲು ಅನುಮತಿ ನೀಡಿದೆ.
7. ಜಕಾತಿ ಆದೇಶ–2025 ರ ಆಯೋಗದ ನಿರ್ದೇಶನದನ್ವಯ, ಮೂಲ ಬಳಕೆಗಿಂತ ಹೆಚ್ಚು ಉಪಯೋಗಿಸಿದ ಯೂನಿಟ್‌ಗಳನ್ನು ಹೆಚ್ಚುವರಿ ಭದ್ರತಾ ಠೇವಣಿಯ ಲೆಕ್ಕಾಚಾರದಲ್ಲಿ ಪರಿಗಣಿಸುವಂತಿಲ್ಲ.
8. ಈ ಯೋಜನೆಯಲ್ಲಿರುವ ಗ್ರಾಹಕರು ಬಳಸುವ ಸರಾಸರಿ ಮೂಲ ಬಳಕೆಗಿಂತ ಹೆಚ್ಚು ಉಪಯೋಗಿಸಿದ ಯೂನಿಟ್‌ಗಳಿಗೆ ಇಂಧನ ಮತ್ತು ವಿದ್ಯುತ್ ಖರೀದಿ ದರದ ವೆಚ್ಚ ಹೊಂದಾಣಿಕೆ ಶುಲ್ಕ **[FPPCA]** ದಲ್ಲಿ ಯಾವುದೇ ಹೆಚ್ಚಳ/ಕಡಿಮೆ ಅನ್ವಯಿಸುವುದಿಲ್ಲ ಹಾಗೂ ಈ ಯೋಜನೆಯನ್ನು ಆಯ್ಕೆ ಮಾಡಿಕೊಂಡಿರುವ ಗ್ರಾಹಕರಿಗೆ ಸರಾಸರಿ ಮೂಲ ಬಳಕೆಯವರೆಗೆ ಇಂಧನ ಮತ್ತು ವಿದ್ಯುತ್ ಖರೀದಿ ದರದ ವೆಚ್ಚ ಹೊಂದಾಣಿಕೆ ಶುಲ್ಕ [FPPCA] ವು ಅನ್ವಯಿಸುತ್ತದೆ.
9. ಆಯೋಗವು ಅನುಮೋದಿಸಿದ ಸಮಯಾಧಾರಿತ **TOD** ವಿದ್ಯುತ್ ದರವು ಈ ಯೋಜನೆಯನ್ನು ಆಯ್ಕೆ ಮಾಡಿಕೊಂಡಿರುವ ಗ್ರಾಹಕರಿಗೆ ಪ್ರಮಾಣಾನುಗುಣವಾಗಿ ಸರಾಸರಿ ಮೂಲ ಬಳಕೆಯವರೆಗೆ ಬಳಸುವ ವಿದ್ಯುತ್ ಬಳಕೆಗೆ ಅನ್ವಯಿಸುತ್ತದೆ.
10. ಆಯೋಗವು ಜಕಾತಿ ಆದೇಶ–2025 ರಲ್ಲಿ ಅನುಮೋದಿಸಿದ ಪಿಂಚಣಿ ಮತ್ತು ಗ್ರಾಜ್ಯುಟಿ ಸರ್ಚಾರ್ಜ್ (**P&G Surcharge**) ದರವು ಈ ಯೋಜನೆಯನ್ನು ಆಯ್ಕೆ ಮಾಡಿಕೊಂಡಿರುವ ಗ್ರಾಹಕರಿಗೆ ಸರಾಸರಿ ಮೂಲ ಬಳಕೆಯವರೆಗೆ ಬಳಸುವ ವಿದ್ಯುತ್ ಬಳಕೆಗೆ ಅನ್ವಯಿಸುತ್ತದೆ.
11. ಸದರಿ ಯೋಜನೆಯಿಂದ ನಿರ್ಗಮಿಸಲು ಗ್ರಾಹಕರು ಇಚ್ಛಿಸಿದ್ದಲ್ಲಿ ಮೂವತ್ತು(30) ದಿನಗಳ ಲಿಖಿತ ಮುಂಗಡ ಸೂಚನೆಯು ಕಡ್ಡಾಯವಾಗಿರುತ್ತದೆ.
12. ಕವಿನಿಆಯೋಗದ ಜಕಾತಿ ಆದೇಶ–2025, ದಿ: 27.03.2025 ರನ್ವಯ, ಮುಂದಿನ ಆದೇಶದ ವರೆಗೆ ಜಾರಿಗೆ ಬಂದಿರುವ ಹಿನ್ನೆಲೆಯಲ್ಲಿ ತಮ್ಮ ಮನವಿ ದಿನಾಂಕದಿಂದ ಅಥವಾ ನಂತರದ ಮೊದಲ ಮಾಪಕ ಓದುವ ದಿನಾಂಕದಿಂದ ಅಂದರೆ **ಜನವರಿ–2026** ಹಾಗೂ ನಂತರದ ತಿಂಗಳುಗಳಿಂದ ಮುಂದಿನ ಆದೇಶದ ವರೆಗೆ ಬಳಸಲ್ಪಡುವ ವಿದ್ಯುತ್ ಪ್ರಮಾಣಕ್ಕೆ ಅನ್ವಯಿಸುತ್ತದೆ.
13. ಸದರಿ ಯೋಜನೆಗೆ ಸಂಬಂಧಿಸಿದಂತೆ ಘನ ಆಯೋಗದ ಮೂಲ ಇಂಗ್ಲೀಷ್ ಅವತರಣಿಕೆಯು (ಆವೃತ್ತಿಯು) ನಿಬಂಧನೆಯು ಅನ್ವಯವಾಗಿರುತ್ತದೆ/ಅನುಪಾಲಿಸಲಾಗುತ್ತದೆ.

**ಮೆ॥ ಶ್ರೀ ಮಾರುತಿ ಗ್ರಾನೈಟ್ಸ್,** ರವರಿಗೆ ಮೂಲ ಬಳಕೆಗಿಂತ ಅಧಿಕ ಯೂನಿಟ್‌ಗಳ ಬಳಕೆಗೆ ರಿಯಾಯಿತಿ ವಿದ್ಯುಚ್ಛಕ್ತಿ ದರವನ್ನು ಮಂಜೂರು ಮಾಡಲಾಗಿದೆ.

**ತಮ್ಮ ವಿಶ್ವಾಸಿ,**

2/2/26

ಪ್ರಧಾನ ವ್ಯವಸ್ಥಾಪಕರು (ಗ್ರಾ.ಸಂ)
**ಬೆವಿಕಂ.**

ಮಾಹಿತಿಗಾಗಿ:-

1. ಮುಖ್ಯ ಪ್ರಧಾನ ವ್ಯವಸ್ಥಾಪಕರು (ಆಪರೇಶನ್ಸ್/ಆಂತರಿಕ ಪರಿಶೋಧನೆ), ನಿಗಮ ಕಾರ್ಯಾಲಯ, ಬೆವಿಕಂ.
2. ಪ್ರಧಾನ ವ್ಯವಸ್ಥಾಪಕರು (ವಿದ್ಯುತ್ ಖರೀದಿ/ಐಸಿಟಿ&ಎಂಐಎಸ್), ನಿಗಮ ಕಾರ್ಯಾಲಯ, ಬೆವಿಕಂ.
3. ಮುಖ್ಯ ಇಂಜಿನಿಯರು(ವಿ), ಬೆ.ಗ್ರಾ.ಪ್ರ.ವ. ಬೆವಿಕಂ, #1-4/3 5ನೇ ಮಹಡಿ, ರಾಜಾಜಿನಗರ ಐಟಿ ಪಾರ್ಕ್, ರಾಜಾಜಿನಗರ ಇಂಡಸ್ಟ್ರಿಯಲ್ ಎಸ್ಟೇಟ್, ಬೆಂಗಳೂರು-560001.
4. ಅಧೀಕ್ಷಕ ಇಂಜಿನಿಯರು(ವಿ), ಬೆಂಗಳೂರು ಗ್ರಾಮೀಣ ವೃತ್ತ, 5ನೇ ಮಹಡಿ, ಕರ್ನಾಟಕ ರಾಜ್ಯ ಬೀಜ ಭವನ ಕಟ್ಟಡ, ಬಳ್ಳಾರಿ ರಸ್ತೆ, ಸಂಜಯ್ ನಗರ, ಹೆಬ್ಬಾಳ ಪೋಲೀಸ್ ಸ್ಟೇಷನ್ ಎದುರು, ಹೆಬ್ಬಾಳ, ಬೆಂಗಳೂರು-560024.

ಪ್ರತಿ:-

5. ಕಾರ್ಯ ನಿರ್ವಾಹಕ ಇಂಜಿನಿಯರ್ (ವಿ), (ವಾ, ಕಾ ಮತ್ತು ಪಾ), ಹೊಸಕೋಟೆ ವಿಭಾಗ, ಬೆವಿಕಂ., ನಳಪಾಕ ಹೋಟೆಲ್ ಹತ್ತಿರ, ಕೆ.ಇ.ಬಿ. ವೃತ್ತ, ಹೊಸಕೋಟೆ, ಬೆಂಗಳೂರು-562114
6. ಲೆಕ್ಕಾಧಿಕಾರಿ (ಆಂತರಿಕ ಪರಿಶೋಧನೆ), ಹೊಸಕೋಟೆ ವಿಭಾಗ, ಬೆವಿಕಂ., ನಳಪಾಕ ಹೋಟೆಲ್ ಹತ್ತಿರ, ಕೆ.ಇ.ಬಿ. ವೃತ್ತ, ಹೊಸಕೋಟೆ, ಬೆಂಗಳೂರು-562114
7. ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ವಿ), (ವಾ, ಕಾ ಮತ್ತು ಪಾ) ದೇವನಹಳ್ಳಿ ಉಪವಿಭಾಗ, ಬೆವಿಕಂ, ದೇವನಹಳ್ಳಿ ಹೊಸ ಬಸ್ ನಿಲ್ದಾಣದ ಹತ್ತಿರ, ಬೆಂಗಳೂರು-562110, ಇವರ ಗಮನಕ್ಕೆ: **ಜನವರಿ-2026** ಹಾಗೂ ನಂತರದ ತಿಂಗಳುಗಳಿಗೆ ಅಂದರೆ ಮುಂದಿನ ಆದೇಶದ ವರೆಗೆ ರಿಯಾಯಿತಿ ವಿದ್ಯುಚ್ಛಕ್ತಿ ಯೋಜನೆಯಡಿಯಲ್ಲಿ ಮಂಜೂರಾತಿ ನೀಡಿರುವ **47,217** ಯೂನಿಟ್‌ಗಳ ನಂತರದ ಬಳಕೆಗೆ **ರೂ. 5** ರಂತೆ ಪ್ರತಿ ಯೂನಿಟ್‌ಗೆ ಬಿಲ್ಲು ಮಾಡುವುದು.
8. ವ್ಯವಸ್ಥಾಪಕ ನಿರ್ದೇಶಕರ ರವರ ಆಪ್ತಕಾರ್ಯದರ್ಶಿಗಳು, ನಿಗಮ ಕಾರ್ಯಾಲಯ, ಬೆ.ವಿ.ಕಂ. ರವರ ಮಾಹಿತಿಗಾಗಿ.